# ನಮ್ಮ ವಿದ್ಯಾರ್ಥಿನಿಲಯದ ಸಂಕ್ಷಿಪ್ತ ಪರಿಚಯ

## ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ ಚಿಕ್ಕಬಳ್ಳಾಪುರ ಟೌನ್ ಚಿಕ್ಕಬಳ್ಳಾಪುರ ಜಿಲ್ಲೆ –562101

| | |
|---|---|
| ಪ್ರಾರಂಭವಾದ ವರ್ಷ ದಿನಾಂಕ | 2011–12ನೇ ಸಾಲು ದಿನಾಂಕ14–05–2011 |
| ಸರ್ಕಾರಿ ಆದೇಶ ಸಂಖ್ಯೆ | ಎಫ್.ಡಿ2 ಟಿಎಫ್‌ಪಿ 2010 ದಿನಾಂಕ:30–04–2010 |
| ಕಟ್ಟಡದ ವಿಸ್ತೀರ್ಣ | 100/100 |
| ಅಕ್ಷಾಂಶ–ರೇಖಾಂಶ | Lat N $13^0$25'52.2624'' Long E $77^0$ 43'18.2676'' |
| ಮಂಜೂರಾತಿಯಾದ ವಿದ್ಯಾರ್ಥಿಗಳ ಸಂಖ್ಯೆ | 100 |
| ಪ್ರಸ್ತುತ ಅಧ್ಯಯನ ಮಾಡುತ್ತಿ ರುವ ವಿದ್ಯಾರ್ಥಿಗಳ ಸಂಖ್ಯೆ | 75 |
| ತರಗತಿ | ಪ್ರಥಮ ಪಿಯುಸಿ ಯಿಂದ ಉನ್ನತ ವ್ಯಾಸಂಗದವರೆಗೆ |
| ಮಾಧ್ಯಮ | – |



### :: ವಿವರಣೆ ::

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ಟೌನ್‌ನಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯವು ಸನ್ 2011–12ನೇ ಸಾಲಿನಿಂದ ಸ್ವಂತ ಕಟ್ಟಡದಲ್ಲಿ ನಡೆಯುತ್ತಿದ್ದು, ಪ್ರಸ್ತುತ ವಿದ್ಯಾರ್ಥಿ ನಿಲಯದಲ್ಲಿ 75 ವಿದ್ಯಾರ್ಥಿಗಳು ವಸತಿ ಪಡೆಯುತ್ತಿದ್ದಾರೆ. ಸದರಿ ವಿದ್ಯಾರ್ಥಿನಿಲಯದಲ್ಲಿ ಪ್ರಥಮ ಪಿ.ಯು.ಸಿ ಪದವಿಯ ಅಂತಿಮ ವರ್ಷದವರೆಗಿನ ಎಲ್ಲಾ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಇಲ್ಲಿ ವಸತಿ ನೀಡಲಾಗುತ್ತಿದೆ.

ಈ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಪಠ್ಯ ವಿಷಯಗಳ ಜೊತೆಗೆ ಪಠ್ಯೇತರ ವಿಷಯದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಹಾಗೂ ನಿಯತಕಾಲಿಕವಾಗಿ ಆರೋಗ್ಯ ತಪಾಸಣೆ ಮಾಡಿಸಲಾಗುತ್ತಿದೆ. ಅದರ ಜೊತೆಗೆ ಕ್ರೀಡಾ ಸಾಮಾಗ್ರಿಗಳನ್ನು, ಸೋಪ್‌ಕಿಟ್, ಬೆಡ್, ಬೆಡ್‌ಶಿಟ್, ಫಿಲ್ಲೋ 2ಟಯರ್ ಕಾಟ್‌ಗಳ ವ್ಯವಸ್ಥೆ ನೀಡಲಾಗುತ್ತಿದೆ. ವಿದ್ಯಾರ್ಥಿ ನಿಲಯದಲ್ಲಿರುವ ವಿದ್ಯಾರ್ಥಿಗಳ ಸುರಕ್ಷತೆಗಾಗಿ ಸಿ.ಸಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ನಿಗದಿಪಡಿಸಿದ ಮೆನುಚಾರ್ಟ್ ಪ್ರಕಾರ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ. ಸ್ನಾನದ ಗೃಹದಲ್ಲಿ ಸೋಲಾರ್ ವಾಟರ್ ಹೀಟರ್ ಮೂಲಕ ಬಿಸಿ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಕುಡಿಯುವ ನೀರಿನ ಶುದ್ದತೆಯ ಬಗ್ಗೆ ಗಮನವಿಟ್ಟು ಶುದ್ದ ಕುಡಿಯುವ ನೀರಿನ ಘಟಕವನ್ನು ಅಳವಡಿಸಲಾಗಿರುತ್ತದೆ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸ್ಪರ್ಧಾತ್ಮಕ ದೃಷ್ಟಿಯಿಂದ ಉತ್ತಮ ಗ್ರಂಥಾಲಯ ವ್ಯವಸ್ಥೆಯನ್ನು ಮಾಡಲಾಗಿದ್ದು, ಗಣಕಯಂತ್ರ ಕೊಠಡಿಯನ್ನು ನಿರ್ವಹಣೆ ಮಾಡಲಾಗಿರುತ್ತದೆ.

ನಿಲಯಾರ್ಥಿಗಳ ದೈಹಿಕ ದೃಷ್ಟಿಯಿಂದ ಜೀಮ್ ಸಾಮಾಗ್ರಿಗಳನ್ನು ವಿದ್ಯಾರ್ಥಿನಿಲಯದ ಆವರಣದಲ್ಲಿ ಅಳವಡಿಸಿದ್ದು, ವೈಯಕ್ತಿಕ ಕಾಳಜಿಯನ್ನು ಮಾಡಲಾಗುತ್ತಿದೆ. ಒಟ್ಟಾರೆಯಾಗಿ ವಿದ್ಯಾರ್ಥಿನಿಯರನ್ನು ಸರ್ವತೋಮುಖ ಪ್ರಗತಿಯೊಂದಿಗೆ ಉತ್ತಮ ನಾಗರೀಕರನ್ನಾಗಿ ರೂಪಿಸುವಲ್ಲಿ ವಸತಿ ನಿಲಯ ಕಾರ್ಯ ನಿರ್ವಹಿಸುತ್ತಿದೆ.

